**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ**

**ಸಿ.ಸಿ.2363/2021**

| | | | | |
|---|---|---|---|---|
| 01 | ಹೆಸರು | ಡಾ.ರವಿಕುಮಾರ್ ವಿ ಎನ್ | ಸಿ ಡಬ್ಲೂ | **8** |
| 02 | ತಂದೆಯ ಹೆಸರು | ನಾರಾಯಣ ಗೌಡ | ಪಿಡಬ್ಲೂ | 5 |
| 03 | ವಯಸ್ಸು | 53 ವರ್ಷ | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವೈದ್ಯಾಧಿಕಾರಿಗಳು | 04.11.2025 | |
| 05 | ಊರು | ಬನ್ನೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ರಿಂದ ಇಲ್ಲಿಯವರೆಗೂ ಬನ್ನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ12.06.2021 ರಂದು ಸಂಜೆ 5.30 ಗಂಟೆಗೆ ಚಾ ಸಾ 1 ರವರು ದಿಃ10.06.2021 ರಂದು ರಾತ್ರಿ 11.00 ಗಂಟೆಗೆ ಆರೋಪಿತಳಾದ ದಿವ್ಯ ಎನ್ನುವವರಿಂದ ತಮಗಾದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯಲು ಬಂದಿರುತ್ತಾರೆ. ನಾನು ಅವರನ್ನು ತಪಾಸಣೆ ಮಾಡಿದ್ದು ಅವರ ಬಲಗೈ ಮತ್ತು ಬಲತೊಡೆಯಂ ಮೇಲೆ ಊತ ಗಾಯಗಳು ಇರುವುದು ಮತ್ತು ನೋವಿರುವುದು ಕಂಡುಬಂದಿದ್ದು,ಯಾವುದೇ ಬಾಹ್ಯ ಗಾಯಗಳು ಕಂಡು ಬಂದಿರುವುದಿಲ್ಲ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ್ದು ಇದ್ದು, ದೊಣ್ಣೆಯಿಂದ ಹಲ್ಲೆ ಮಾಡಿದಾಗ ಸಂಭವಿಸುತ್ತದೆ.

ಚಾ ಸಾ 9 ರವರ ಕೋರಿಕೆಯಂತೆ ನಾನು ಅವರಿಗೆ ಗಾಯಾಳುವಿನ ಗಾಯದ ಪ್ರಮಾಣಪತ್ರವನ್ನು ಒದಗಿಸಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣಪತ್ರ ವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಬಿ ಎಸ್ ವಕೀಲರಿಂದಃ**

ಸಾಮಾನ್ಯವಾಗಿ ಊತ ಗಾಯಗಳು ವಾಸಿಯಾಗಲು **4-5** ದಿನಗಳು ಬೇಕಾಗುತ್ತವೆ. ಚಾ ಸಾ **1** ರವರಿಗಾದ ಗಾಯಗಳು ನಾನು ತಪಾಸಣೆ ಮಾಡಿದಾಗ ಅವು ತಾಜಾ ಗಾಯಗಳಾಗಿರುವುದು ಕಂಡು ಬಂದಿರುತ್ತದೆ.

ಸದರಿ ಗಾಯಗಳು 2 ದಿನಗಳ ಹಿಂದೆ ಆಗಿದ್ದವು. ಮನೆಯಲ್ಲಿ ಕೆಲಸ ಮಾಡುವಾಗ ಜಾರಿಬಿದ್ದಾಗ ಅಥವಾ ಗೋಡೆಗೆ ತಗುಲಿದಾಗ ನಿ ಪಿ 4 ರಲ್ಲಿ ಕಂಡುಬರುವ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ.

ನಾನು ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಗಾಯದ ವಯಸ್ಸನ್ನು ನಿ ಪಿ 4 ರಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 4 ಅನ್ನು ನಾನು ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.